ಇ) ಸಮುದ್ರ ಕೊರತೆ ನಿಯಂತ್ರಣದ ಬಗ್ಗೆ ಸಲಹೆ ನೀಡಲು ಸರ್ಕಾರವು ಒಂದು ತಾಂತ್ರಿಕ ಪರಿಣಿತರ ಸಮಿತಿ ನೇಮಿಸಿದ್ದು, ಈ ಸಮಿತಿಯು ತುರ್ತು ಸಮುದ್ರ ಕೊರತೆ ಪ್ರದೇಶಗಳಲ್ಲಿ ಮರಳು ಚೀಲಗಳನ್ನು ಬಳಸಲು ಸಲಹೆ ನೀಡಿರುತ್ತದೆ. ಇದನ್ನು ಕೆ.ಆರ್.ಸಿ. ಸುರತ್ಕಲ್ ತಜ್ಞರು ಶಿಫಾರಸ್ಸು ಮಾಡಿರುತ್ತಾರೆ. ಇದನ್ನು ಕೇವಲ ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಮಾತ್ರ ಅಳವಡಿಸದೇ ರಾಜ್ಯದ ಕರಾವಳಿಯಲ್ಲಿ ಸಮುದ್ರ ಕೊರತ ಕಂಡು ಬಂದ ಸ್ಥಳಗಳಲ್ಲಿ ಅಳವಡಿಸಲಾಗಿದೆ. ಇದರಿಂದ ಸರ್ಕಾರದ ವೆಚ್ಚ ಕಡಿಮೆಯಾಗಿರುತ್ತದೆ.

ಸಮುದ್ರ ಪ್ರದೇಶಕ್ಕೆ ಶಾಶ್ವತ ತಡೆಗೋಡೆ ನಿರ್ಮಾಣ

604(1122) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಮುದ್ರ ಕರಾವಳಿ ಪ್ರದೇಶದ ವಿಸ್ತೀರ್ಣ ಎಷ್ಟು; ಇದರಲ್ಲಿ ಎಷ್ಟು ಕಿಲೋ ಮೀಟರ್ ಉದ್ದದ ಪ್ರದೇಶಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ; ಎಷ್ಟು ಕಿಲೋ ಮೀಟರ್ ಪ್ರದೇಶಕ್ಕೆ ತಾತ್ಕಾಲಿಕ ತಡೆಗೋಡೆ ನಿರ್ಮಾಣವಾಗಿದೆ;

ಆ) ಬಾಕಿ ಉಳಿದಿರುವ ವಿಸ್ತೀರ್ಣಕ್ಕೆ ಯಾವಾಗ ತಡೆಗೋಡೆ ನಿರ್ಮಿಸಲಾಗುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರ ರಾಜ್ಯ ಸಚಿವರು)

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 13.38 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಇದ್ದು, ಇದರಲ್ಲಿ 2.47 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ ಮತ್ತು 1.935 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ 1.08 ಕಿ.ಮೀ. ಉದ್ದಕ್ಕೆ ತಾತ್ಕಲಿಕ ತಡೆಗೋಡೆ ನಿರ್ಮಿಸಲಾಗಿದೆ.

ಆ) ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದ್ದು ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ನಂತರ ಹಣದ ಲಭ್ಯತೆಯ ಆಧಾರದ ಮೇಲೆ ಅವಶ್ಯ ಕ್ರಮ ಕೈಗೊಳ್ಳಲಾಗುವುದು.

ಕಾರವಾರ ಬಂದರಿನಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ಕೆಲಸ ಕಾರ್ಯಗಳ ವಿವರ

605(1124) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ಬಂದರಿನಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ಕೆಲಸ ಕಾರ್ಯಗಳನ್ನು ಪ್ರಾರಂಭಿಸಲಾಗಿದೆಯೇ; ಹಾಗಾದಲ್ಲಿ ಯಾವಾಗಿನಿಂದ ಪ್ರಾರಂಭಿಸಲಾಯಿತು; ಇಲ್ಲವಾದಲ್ಲಿ, ವಿಳಂಬಕ್ಕೆ ಕಾರಣಗಳೇನು?

ಆ) ಕಂಟೈನರ್ ಹ್ಯಾಂಡ್ಲಿಂಗ್ ಕೆಲಸ ಕಾರ್ಯಗಳನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೊನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ) ಇಲ್ಲ

ಗುತ್ತಿಗೆದಾರರು ಕಂಟ್ರೈನರ್ ಯಾರ್ಡ್‌ಗಾಗಿ ಸರ್ಕಾರವು, ನಿಯಮದಂತೆ ನಿಗಧಿಪಡಿಸಿರುವ ವಾರ್ಷಿಕ ಬಾಡಿಗೆಯು ತೀರ ಹೆಚ್ಚಾಗಿದೆಯೆಂದೂ, ಕಂಟ್ರೈನರ್ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. ಬಾಡಿಗೆ ಕಡಿಮೆ ಮಾಡಬೇಕೆಂಬ ಕೋರಿಕೆಯು ಪರಿಶೀಲನೆಯಲ್ಲಿದೆ.

ಆ) ಗುತ್ತಿಗೆದಾರರ ಕೋರಿಕೆಯನ್ನು ಅಂತಿಮಗೊಳಿಸಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಗಂಗಾವತಿ ಸಕ್ಕರೆ ಕಾರ್ಖಾನೆ ದಾಸ್ತಾನು

606(793) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾವತಿ ಸಕ್ಕರೆ ಕಾರ್ಖಾನೆ ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಕಾರ್ಖಾನೆಗೆ ಯಾವ ಯಾವ ಸಂಸ್ಥೆಗಳು ಸಾಲದ ನೆರವು ನೀಡಿದೆ.

ಇ) ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ವ್ಯಾಪ್ತಿಯಲ್ಲಿ ಉಳಿಸಿಕೊಳ್ಳಲು ಏನಾದರೂ ಯೋಜನೆ ಸರ್ಕಾರದ ಗಮನದಲ್ಲಿದೆಯೇ:

ಈ) ಗಂಗಾವತಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದ ವೇತನ ಮತ್ತು ಇತರೇ ವೆಚ್ಚ ಎಷ್ಟು:

ಉ) ಸಕ್ಕರೆ ಕಾರ್ಖಾನೆಗೆ ರೈತರಿಂದ ಪೂರೈಕೆಯಾದ ಕಬ್ಬು ಎಷ್ಟು ಟನ್ ಮತ್ತು ಅದರ ಮೊತ್ತ ಎಷ್ಟು

ಊ) ರೈತರಿಗೆ ಪಾವತಿಸಿದ ಹಣ ಎಷ್ಟು: ರೈತರಿಗೆ ಪಾವತಿಸಬೇಕಾದ ಬಾಕಿ ಇರುವ ಹಣವೆಷ್ಟು: ಪಾವತಿಸದಿದ್ದಲ್ಲಿ ರೈತರಿಗೆ ಎಷ್ಟು ದಿವಸಗಳಲ್ಲಿ ಹಣ ಪಾವತಿಸಲಾಗುವುದು:

ಋ) ಗಂಗಾವತಿ ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ಟನ್ ಸಕ್ಕರೆ ದಾಸ್ತಾನು ಇರುತ್ತದೆ.

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಬಂದಿದೆ.

ಆ) ಐಡಿಬಿಐ, ಐಎಫ್‌ಸಿಐ, ಐಸಿಐಸಿಐ, ಎಸ್‌ಬಿಐ, ಸಿಬಿ. ಎಸ್‌ಬಿಹೆಚ್, ಕಾರ್‌ಪೊರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಎಸ್‌ಬಿಹೆಚ್ (ಎಡಿಬಿ) ಮತ್ತು ಕೆಎಸ್‌ಐಡಿಸಿ ಮತ್ತು ಕರ್ನಾಟಕ ಸರ್ಕಾರ

ಇ) ಖಾಸಗೀಕರಣ ಪ್ರಕ್ರಿಯೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಇದೆ.